ಮತ್ತು ಲಿಂಗವ್ಯವಸ್ಥೆಯ ಹಿನ್ನೆಲೆಯು ಇವುಗಳನ್ನು ಮತ್ತೊಂದು ಬಗೆಯಲ್ಲಿ ಓದುವಂತೆ ನಮ್ಮನ್ನು ಒತ್ತಾಯಿಸುತ್ತವೆ.

## 2

ಕನ್ನಡದ ಮಹಿಳಾ ಆತ್ಮಕಥನಗಳನ್ನು ನಾಲ್ಕು ಘಟ್ಟಗಳಲ್ಲಿ ಗುರುತಿಸಬಹುದು. ಮೊದಲನೆಯ ಘಟ್ಟದ ಆತ್ಮಕಥನಗಳು 'ಶೋಧ'ದ ಮಾದರಿ. ಎರಡನೆಯ ಘಟ್ಟದ್ದು 'ಅಸ್ತಿತ್ವ'ದ ಮಾದರಿ ಮತ್ತು ಮೂರನೆಯ ಘಟ್ಟದವು 'ಅಸ್ಮಿತೆ'ಯ ಮಾದರಿ. ನಾಲ್ಕನೆಯ ಘಟ್ಟವು 'ಸ್ವಾಯತ್ತತೆ'ಯ ಮಾದರಿ.

ಮೊದಲನೆಯ ಘಟ್ಟದಲ್ಲಿ ಪೂರ್ಣಪ್ರಮಾಣದ ಆತ್ಮಕಥನಗಳು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಲೇಖಕಿಯರ ಸಂಘದವರು ಪ್ರಕಟಿಸಿರುವ 'ಲೇಖ ಲೋಕ'ದಲ್ಲಿ ಪ್ರಕಟವಾಗಿರುವ, ಶಾಂತಾದೇವಿ ಮಾಳವಾಡ, ಮಲ್ಲಿಕಾ ಕಡಿದಾಳ್ ಮಂಜಪ್ಪ ಮೊದಲಾದವರ ನಿರೂಪಣೆಗಳನ್ನು ಓದುತ್ತಿದ್ದರೆ, ಈ ಹೆಣ್ಣುಮಕ್ಕಳಲ್ಲಿ ಕೃತಜ್ಞತಾಭಾವವು ತುಂಬಿ ತುಳುಕುತ್ತದೆ. ಗಂಡಿನ ಏಕಮೇವಾದ್ವಿತೀಯವಾದ ಸಾಮ್ರಾಜ್ಯದಲ್ಲಿ ತಮಗೊಂದು ಸ್ಥಾನವನ್ನು ಕೊನೆಗಾದರೂ ಕೊಡುವ ದಯೆ ತೋರಿದರಲ್ಲ ಎನ್ನುವುದರ ಜೊತೆಗೇ ಈ ವ್ಯವಸ್ಥೆಯಲ್ಲಿ ತಾವು ಯಾರು, ತಮ್ಮ ಸ್ಥಾನವೇನು, ಪಾತ್ರದ ಪಾತ್ರವೇನು ಎನ್ನುವ ಪ್ರಶ್ನೆಗಳು ಒಳಗೇ ಇವರನ್ನು ಕಾಡುತ್ತಿವೆ. ಪ್ರಕಟವಾಗಿ ಕೇಳದಿದ್ದರೂ ತಾವು ಗಂಡಿನ ಮರ್ಜಿಯಲ್ಲಿಯೇ ಇದ್ದೇವೆ ಮತ್ತು ಇರಬೇಕು ಎನ್ನುವುದಾದರೆ, ಇದು ತಪ್ಪಲ್ಲವೆ ಎನ್ನುವ ಅರಿವಿದ್ದೂ ಅದನ್ನು ನೇರವಾಗಿ ಕೇಳಲು ಹಿಂಜರಿಯುತ್ತವೆ. ಇದಕ್ಕೆ ಹಲವು ಕಾರಣಗಳಿರಬಹುದು. ಹೆಣ್ಣಿನ ಈ ಹೋರಾಟದ ಮೊದಲ ಹೆಜ್ಜೆಯನ್ನು ಇಡುತ್ತಿರುವ ನಾವು ಕ್ರಾಂತಿಕಾರಿಗಳಾಗಿ ಬಿಟ್ಟರೆ ಸಿಕ್ಕ ಸಣ್ಣ ಅವಕಾಶವೂ ತಮ್ಮಿಂದ ತಪ್ಪಿ ಹೋಗಬಹುದು ಎನ್ನುವುದಿರಬಹುದು. ಹಂತ ಹಂತವಾಗಿ ನಡೆಸಬೇಕಾದ ಈ ಹೋರಾಟದಲ್ಲಿ ಆರಂಭದಲ್ಲಿಯೇ ಎಲ್ಲವನ್ನೂ ನಿರೀಕ್ಷಿಸಲಾಗದು ಎನ್ನುವ ಎಚ್ಚರಿಕೆ ಇರಬಹುದು. ಇಷ್ಟಾದರೂ ಸಾಧ್ಯವಾಯಿತಲ್ಲ ಎನ್ನುವ ಸಮಾಧಾನ ಸಂತೋಷಗಳೂ ಇರಬಹುದು. ತಮ್ಮ ಅಮ್ಮ ಅಜ್ಜಿಯರಿಗೆ ಕನಸಿನಲ್ಲಿಯೂ ಸಾಧ್ಯವಿಲ್ಲದ್ದು ಈಗ ಸಾಧ್ಯವಾಗಿದೆಯಲ್ಲ ಎನ್ನುವ ಉದ್ಗಾರ ಮತ್ತೆ ಮತ್ತೆ ಇಲ್ಲಿ ಕೇಳಿಸುತ್ತದೆ. ಮನೆಗೇ ಉಪಾಧ್ಯಾಯರನ್ನು ಕರೆಸಿಯೇ ಆಗಲಿ ಅಕ್ಷರದ ಭಾಗ್ಯವಾದರೂ ತಮಗೆ ದೊರೆಯಿತೆನ್ನುವುದು ಸಣ್ಣ ಸಂಗತಿಯಲ್ಲ ಎಂದು ಸಕಾರಣವಾಗಿ ಇವರು ಭಾವಿಸುತ್ತಾರೆ. ಮನೆಯ ಕೆಲಸಗಳೆಲ್ಲ ಮುಗಿದ ಮೇಲೆ ಓದಲು ಬರೆಯಲು ಪತಿರಾಯರು ಅನುಮತಿ ಕೊಟ್ಟದ್ದು, ಅವಕಾಶ ಕೊಟ್ಟದ್ದು 'ತಮ್ಮ ಪುಣ್ಯ' ಎನ್ನುವ ಸಾರ್ಥಕ ಭಾವದಲ್ಲಿಯೇ ಈ ನಿರೂಪಣೆಗಳಿವೆ. ಮನೆಯ ಹೊರಗಿನ ಉದ್ಯಾನದಲ್ಲಿ ಅರಳಿರುವ ಹೂವುಗಳಂತೆಯೇ ಸಾಹಿತ್ಯದ ಹೂವುಗಳನ್ನು, ಅವುಗಳ ಪರಿಮಳವನ್ನು ಆಘ್ರಾಣಿಸಲಾದರೂ ಸಾಧ್ಯವಾಯಿತಲ್ಲ ಎನ್ನುವುದು ಇವರು ಬದುಕಿನ ಬಗೆಗೆ ಬರೆಯುವ ಷರಾ. ಮುಗ್ಧವಾಗಿ, ಅಲ್ಪತೃಪ್ತಿಯವು ಎನ್ನುವಂತೆ ಕಾಣುವ ಈ ಆತ್ಮಕಥಾನಕಗಳು ಐತಿಹಾಸಿಕವಾಗಿ ಮಹತ್ವದವು. ಹೆಣ್ಣಿನ ಬಗೆಗೆ ಸ್ತ್ರೀವಾದಿಗಳು ಎಲ್ಲ ಕಾಲಕ್ಕೂ ಪ್ರತಿಪಾದಿಸುವ ಒಂದು ಸಂಗತಿಯೆಂದರೆ, ಬದಲಾವಣೆಗೆ, ತನ್ನ ಹಕ್ಕುಗಳಿಗೆ ಹೆಣ್ಣಿನ ಮನಸ್ಸು ಸದಾ

